**All India Radio: Bangalore**
**National Bulletin In Kannada**
**10.01.2025  07.35 a.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**10.01.2025  07.35 a.m.**
*******************

ಮುಖ್ಯಾಂಶಗಳು

೧. ಒಡಿಶಾದ ಭುವನೇಶ್ವರದಲ್ಲಿ ೧೮ನೇ ಪ್ರವಾಸಿ ಭಾರತೀಯ ದಿವಸ್ ಸಮಾವೇಶದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಗಿ

೨. ಕಳೆದ ೧೦ ವರ್ಷಗಳಲ್ಲಿ, ಜೈವಿಕ ಆರ್ಥಿಕತೆಯು ೧೦ ಬಿಲಿಯನ್ ಡಾಲರ್‌ಗಳಿಂದ ೧೫೦ ಬಿಲಿಯನ್ ಡಾಲರ್‌ಗಳಿಗೆ ಏರಿಕೆ - ಪ್ರಧಾನಿ ನರೇಂದ್ರ ಮೋದಿ

೩. ಪ್ರಯಾಗ್‌ರಾಜ್ ಮಹಾಕುಂಭ ಮೇಳ; ಆಕಾಶವಾಣಿಯ ಕುಂಭವಾಣಿ ವಿಶೇಷ ವಾಹಿನಿಯಿಂದ ನೇರ ವೀಕ್ಷರ ವಿವರಣೆ

೪. ಅಂತಾರಾಷ್ಟ್ರೀಯ ಮಹಿಳಾ ಏಕದಿನ ಕ್ರಿಕೆಟ್; ಸರಣಿಯ ಮೊದಲ ಪಂದ್ಯದಲ್ಲಿಂದು ಭಾರತ - ಐರ್ಲ್ಯಾಂಡ್ ಮುಖಾಮುಖಿ

***************

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದು ಒಡಿಶಾದ ಭುವನೇಶ್ವರದಲ್ಲಿ ನಡೆಯುತ್ತಿರುವ ೧೮ನೇ ಪ್ರವಾಸಿ ಭಾರತೀಯ ದಿವಸ್ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ.

ಒಡಿಶಾ ರಾಜಧಾನಿಗೆ ನಿನ್ನೆ ಆಗಮಿಸಿದ ರಾಷ್ಟ್ರಪತಿ ಅವರು, ಇಂದು ಸಮಾವೇಶದಲ್ಲಿ ಪಾಲ್ಗೊಂಡಿರುವ ೭೫ ದೇಶಗಳ ಅನಿವಾಸಿ ಭಾರತೀಯರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಇದೇ ವೇಳೆ ಅವರು, ವಿವಿಧ ಕ್ಷೇತ್ರಗಳಲ್ಲಿ ಅನನ್ಯ ಕೊಡುಗೆ ನೀಡಿದ ಅನಿವಾಸಿ ಭಾರತೀಯ ಸಮುದಾಯದ ಸದಸ್ಯರಿಗೆ ಪ್ರವಾಸಿ ಭಾರತೀಯ ಸಮ್ಮಾನ್ ಪ್ರಶಸ್ತಿಯನ್ನು ಪ್ರದಾನ ಮಾಡಲಿದ್ದಾರೆ.

ಈ ಪ್ರಶಸ್ತಿಯು ಅನಿವಾಸಿ ಭಾರತೀಯರಿಗೆ ಅಥವಾ ಅವರು ನಡೆಸುತ್ತಿರುವ ಸಂಸ್ಥೆಗಳಿಗೆ ನೀಡಲಾಗುವ ಭಾರತದ ಅತ್ಯುನ್ನತ ಪ್ರಶಸ್ತಿಯಾಗಿದೆ.

***************

ವಿವಿಧ ಜಾಗತಿಕ ಸಮಸ್ಯೆಗಳಿಗೆ ಪರಿಹಾರಕ್ಕಾಗಿ ಜಗತ್ತು ಇಂದು ಭಾರತದತ್ತ ನೋಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ನವದೆಹಲಿಯಲ್ಲಿ ನಿನ್ನೆ ನಡೆದ ಜೀನೋಮಿಕ್ಸ್ ಡೇಟಾ ಕಾನ್ಕ್ಲೇವ್‌ನಲ್ಲಿ ನೀಡಿದ ವೀಡಿಯೊ ಸಂದೇಶದಲ್ಲಿ ಅವರು, ಜೀನೋಮ್ ಇಂಡಿಯಾ ಯೋಜನೆಯು ದೇಶದ ಜೈವಿಕ ತಂತ್ರಜ್ಞಾನದ ಭೂದೃಶ್ಯದಲ್ಲಿ ನಿರ್ಣಾಯಕವಾಗಿದೆ. ಕಳೆದ ೧೦ ವರ್ಷಗಳಲ್ಲಿ, ಜೈವಿಕ ಆರ್ಥಿಕತೆಯು ೧೦ ಬಿಲಿಯನ್ ಡಾಲರ್‌ಗಳಿಂದ ೧೫೦ ಬಿಲಿಯನ್ ಡಾಲರ್‌ಗಳಿಗೆ ಏರಿಕೆ ಕಂಡಿದೆ ಎಂದು ಅವರು ಹೇಳಿದರು.

ಜೀನೋಮ್ ಇಂಡಿಯಾ ದತ್ತಾಂಶ ಬಿಡುಗಡೆಯನ್ನು ಶ್ಲಾಘಿಸಿದ ಪ್ರಧಾನಿ, ಇದು ರಾಷ್ಟ್ರದಲ್ಲಿ ಸಂಶೋಧನೆ ಮತ್ತು ಆರೋಗ್ಯ ರಕ್ಷಣೆಗೆ ಒಂದು ಐತಿಹಾಸಿಕ ಹೆಜ್ಜೆಯಾಗಿದೆ. ಈ ದತ್ತಾಂಶವನ್ನು ದೇಶಾದ್ಯಂತ ಸಂಶೋಧಕರು, ವಿಜ್ಞಾನಿಗಳು ಮತ್ತು

ವಿದ್ವಾಂಸರು ಬಳಸಿಕೊಳ್ಳಬಹುದು. ಭಾರತೀಯರ ಆನುವಂಶಿಕ ರಚನೆಯಲ್ಲಿ ಗಮನಾರ್ಹ ವೈವಿಧ್ಯತೆ ಇದೆ ಎಂದು ಪ್ರಧಾನಿ ತಿಳಿಸಿದರು.

ಕಳೆದ ಹತ್ತು ವರ್ಷಗಳಲ್ಲಿ, ದೇಶದಲ್ಲಿ ಸಂಶೋಧನೆ ಮತ್ತು ನಾವೀನ್ಯತೆಗಳಿಗೆ ವಿಶೇಷ ಗಮನ ನೀಡಲಾಗಿದೆ. ಕೋಟ್ಯಂತರ ಜನರಿಗೆ ಉಚಿತ ಚಿಕಿತ್ಸೆ ಮತ್ತು ಉತ್ತಮ ಆರೋಗ್ಯ ಮೂಲಸೌಕರ್ಯವನ್ನು ಒದಗಿಸಲಾಗುತ್ತಿದೆ ಎಂದು ಅವರು ಹೇಳಿದರು.

ಧ್ವನಿ: ಪ್ರಧಾನಿ ನರೇಂದ್ರ ಮೋದಿ

ಈ ಸಂದರ್ಭದಲ್ಲಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಜಿತೇಂದ್ರ ಸಿಂಗ್ ಫ್ರೆಮ್‌ವರ್ಕ್ ಫಾರ್ ಎಕ್ಸ್‌ಚೇಂಜ್ ಆಫ್ ಡೇಟಾ ಪ್ರೋಟೋಕಾಲ್ ಬಿಡುಗಡೆಗೊಳಿಸಿದರು. ಹಾಗೂ ಐಬಿಡಿಸಿ ಡೇಟಾ ಪ್ರವೇಶ ಪೋರ್ಟಲ್‌ಗೆ ಚಾಲನೆ ನೀಡಿದರು.

***************

ಇದೇ ೧೩ ರಿಂದ ಆರಂಭವಾಗುತ್ತಿರುವ ಪ್ರಯಾಗ್ ರಾಜ್ ಮಹಾಕುಂಭ ಮೇಳಕ್ಕೆ ಸಿದ್ಧತೆಗಳು ಭರದಿಂದ ಸಾಗಿದ್ದು, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ನಿನ್ನೆ ಮಹಾಕುಂಭ ಮೇಳದ ಸಿದ್ಧತೆಗಳ ಕುರಿತು ಪರಿಶೀಲನೆ ನಡೆಸಿದರು.

ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈ ಬಾರಿ ಕುಂಭಮೇಳಕ್ಕೆ ೪೦ ಕೋಟಿಗೂ ಅಧಿಕ ಭಕ್ತಾಧಿಗಳ ಆಗಮನದ ನಿರೀಕ್ಷೆ ಇದ್ದು, ಸುಮಾರು ೨ ಲಕ್ಷ ಕೋಟಿ ರೂಪಾಯಿ ಆದಾಯ ತರುವ ನಿರೀಕ್ಷೆ ಇದೆ. ಮಹಾಕುಂಭ ಮೇಳ ಶ್ರದ್ಧೆ ಮತ್ತು ಆಧುನಿಕತೆಯ ಸಮಾಗಮವಾಗಿದೆ. ತ್ರಿವೇಣಿ ಸಂಗಮದಲ್ಲಿ ಯಾತ್ರಿಕರ ಸ್ನಾನಕ್ಕಾಗಿ ವಿಶೇಷ ವ್ಯವಸ್ಥೆಗಳನ್ನು ಮಾಡಲಾಗಿದೆ. ಉತ್ಸವದ ಸುರಕ್ಷಿತ ಹಾಗೂ ಶಾಂತಿಯುತ ಆಯೋಜನೆಗಾಗಿ ಸಕಲ ಸಿದ್ಧತೆಗಳು ಕೈಗೊಳ್ಳಲಾಗಿದೆ ಎಂದರು.

ಧ್ವನಿ: ಯೋಗಿ ಆದಿತ್ಯನಾಥ್

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಪ್ರಯಾಗ್‌ರಾಜ್‌ನಲ್ಲಿ ನಿನ್ನೆ ೨೦೨೫ರ ಮಹಾಕುಂಭಕ್ಕಾಗಿ ಡಿಜಿಟಲ್ ಮಾಧ್ಯಮ ಕೇಂದ್ರವನ್ನು ಉದ್ಘಾಟಿಸಿದರು.

***************

ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿಂದು ೨೦೨೫ರ ಮಹಾಕುಂಭಕ್ಕಾಗಿ ವಿಶೇಷ ಆಕಾಶವಾಣಿಯ ವಾಹಿನಿ ಕುಂಭವಾಣಿಗೆ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಇಂದು ಚಾಲನೆ ನೀಡಲಿದ್ದಾರೆ.

ಇದೇ ವೇಳೆ, ಕುಂಭ ಮಂಗಳ ದ್ವುನ್‌ಗೆ ಅವರು ಚಾಲನೆ ನೀಡಲಿದ್ದು, ಕಾರ್ಯಕ್ರಮದಲ್ಲಿ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ.ಎಲ್.ಮುರುಗನ್ ವರ್ಚುಯಲ್ ಮೂಲಕ ಭಾಗವಹಿಸಲಿದ್ದಾರೆ.

ಕುಂಭವಾಣಿ ವಾಹಿನಿ ಇಂದಿನಿಂದ ಆರಂಭಗೊಂಡು ಫೆಬ್ರವರಿ ೨೬ರವರೆಗೆ ಕಾರ್ಯನಿರ್ವಹಿಸಲಿದೆ. ಈ ಸಮಯದಲ್ಲಿ ಬೆಳಗ್ಗೆ ೫.೫೫ ರಿಂದ ರಾತ್ರಿ ೧೦.೦೫ರ ವರೆಗೆ ಮಹಾಕುಂಭ ಮೇಳದ ಪ್ರತಿ ಚಟುವಟಿಕೆ ಆಧರಿತ ವಿಶೇಷ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಿದೆ.

ಅಮೃತ ಸ್ನಾನದ ನೇರ ವೀಕ್ಷಕ ವಿವರಣೆ ಈ ವಾಹಿನಿಯ ಮೂಲಕ ಆಲಿಸಬಹುದಾಗಿದೆ. ಕುಂಭವಾಣಿಯ ವಾಹಿನಿಯನ್ನು ೧೦೩.೫ ತರಂಗಾಂತರ, ನ್ಯೂಸ್ ಆನ್ ಏರ್ ಆಪ್ ಹಾಗೂ ವೇವ್ಸ್ ಒಟಿಟಿ ವೇದಿಕೆಯಲ್ಲೂ ಆಲಿಸಬಹುದಾಗಿದೆ.

***************

ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ನವದೆಹಲಿಯಲ್ಲಿಂದು ಕೇಂದ್ರೀಯ ವಿದ್ಯಾಲಯಗಳಿಗೆ ೩೪ನೇ ರಾಷ್ಟ್ರೀಯ ಯುವ ಸಂಸತ್ ಸ್ಪರ್ಧೆ ೨೦೨೩-೨೪ರ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಈ ಕುರಿತು ಮಾತನಾಡಿರುವ ಸಚಿವರು, ಕೇಂದ್ರೀಯ ವಿದ್ಯಾಲಯದ ಸಂಘಟನೆಯ ೨೫ ಪ್ರದೇಶಗಳಲ್ಲಿ ವ್ಯಾಪಿಸಿರುವ ೧೫೦ ಕೇಂದ್ರೀಯ ವಿದ್ಯಾಲಯಗಳು ಸ್ಪರ್ಧೆಯ ಭಾಗವಾಗಿದ್ದಾರೆ. ಯುವ ಸಂಸತ್ ಯೋಜನೆಯು ಯುವ ಪೀಳಿಗೆಯಲ್ಲಿ ಶಿಸ್ತು, ವಿಭಿನ್ನ ಅಭಿಪ್ರಾಯಗಳ ಕುರಿತು ಸಂಯಮ ಹಾಗೂ ಇತರ ಮೌಲ್ಯಗಳ ಕುರಿತು ಅರಿವು ಮೂಡಿಸಲು ಸಹಕಾರಿಯಾಗಿದೆ ಎಂದಿದ್ದಾರೆ.

***************

ದೆಹಲಿ ವಿಧಾನಸಭಾ ಚುನಾವಣೆಗೆ ಇಂದು ಅಧಿಸೂಚನೆ ಹೊರಡಿಸಲಾಗುವುದು. ಇದರೊಂದಿಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಲಿದೆ.

ಅಭ್ಯರ್ಥಿಗಳು ಜನವರಿ ೧೭ ರವರೆಗೆ ನಾಮಪತ್ರಗಳನ್ನು ಸಲ್ಲಿಸಬಹುದು. ನಾಮಪತ್ರ ಹಿಂಪಡೆಯಲು ಈ ತಿಂಗಳ ೨೦ ಕೊನೆಯ ದಿನಾಂಕವಾಗಿದೆ.

***************

ಮುಂದಿನ ತಿಂಗಳು ಆಯೋಜಿಸಲಾಗುತ್ತಿರುವ ಏರೋ ಇಂಡಿಯಾ ೨೦೨೫ರ ಪೂರ್ವಭಾವಿಯಾಗಿ ನವದೆಹಲಿಯಲ್ಲಿಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ರಾಯಭಾರಿಗಳ ದುಂಡುಮೇಜಿನ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ.

ಕೇಂದ್ರ ರಕ್ಷಣಾ ಸಚಿವಾಲಯ ೧೫೦ಕ್ಕೂ ಹೆಚ್ಚು ಮಿತ್ರ ರಾಷ್ಟ್ರಗಳ ರಾಯಭಾರಿಗಳಿಗೆ ಸಭೆಯಲ್ಲಿ ಪಾಲ್ಗೊಳ್ಳುವಂತೆ ಆಹ್ವಾನಿಸಿದೆ. ಏಷ್ಯಾದ ಅತಿ ದೊಡ್ಡ ಏರ್ ಶೋ ಆಗಿರುವ ಏರೋ ಇಂಡಿಯಾದ ೧೫ನೇ ಆವೃತ್ತಿ ಬೆಂಗಳೂರಿನ ಯಲಹಂಕದ ವಾಯುನೆಲೆಯಲ್ಲಿ ಫೆಬ್ರವರಿ ೧೦ ರಿಂದ ೧೪ರವರೆಗೆ ನಡೆಯಲಿದೆ.

***************

ಮಾಜಿ ಕೇಂದ್ರ ಹಣಕಾಸು ಸಚಿವ ಪಿ.ಚಿದಂಬರಂ ಅವರ ಪುತ್ರ ಮತ್ತು ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ ವಿರುದ್ಧ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧ ಪಟ್ಟಂತೆ ಕೇಂದ್ರೀಯ ತನಿಖಾ ತಂಡ-ಸಿಬಿಐ ಹೊಸ ಎಫ್‌ಐಆರ್ ದಾಖಲಿಸಿದೆ.

ಕಾರ್ತಿ ಚಿದಂಬರಂ ಅವರ ನಿಯಂತ್ರಣದಲ್ಲಿರುವ ಖಾಸಗಿ ಸಂಸ್ಥೆಗೆ ಮದ್ಯ ಪಾನೀಯ ಕಂಪನಿಯೊಂದು ಅನುಮಾನಾಸ್ಪದವಾಗಿ ಹಣ ಪಾವತಿಸಿವೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಲಾಗಿದೆ.

ಮದ್ಯದ ಸುಂಕ ರಹಿತ ಮಾರಾಟದ ಮೇಲಿನ ನಿಷೇಧಕ್ಕೆ ಸಂಬಂಧಿಸಿದಂತೆ ಮದ್ಯ ಪಾನೀಯ ಕಂಪನಿಗೆ ಪರಿಹಾರ ನೀಡಿದ ಆರೋಪದ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ.

***************

ಈ ವರ್ಷದ ಗಣರಾಜ್ಯೋತ್ಸವದ ಪೆರೇಡ್ ವೀಕ್ಷಿಸಲು ಸುಮಾರು ಹತ್ತು ಸಾವಿರ ವಿಶೇಷ ಅತಿಥಿಗಳನ್ನು ಆಹ್ವಾನಿಸಲಾಗಿದೆ.

ಈ ವಿಶೇಷ ಅತಿಥಿಗಳಲ್ಲಿ ಪಂಚಾಯಿತಿಗಳ ಮುಖ್ಯಸ್ಥರು, ವಿಪತ್ತು ನಿರ್ವಹಣಾ ತಂಡದ ಕಾರ್ಯಕರ್ತರು, ಜಲ ಯೋಧರು, ಕೈಮಗ್ಗ ಮತ್ತು ಕರಕುಶಲ ಕುಶಲಕರ್ಮಿಗಳು, ಮನ್ ಕಿ ಬಾತ್‌ನಲ್ಲಿ ಭಾಗವಹಿಸಿದವರು, ಮೈ ಭಾರತ್ ಸ್ವಯಂಸೇವಕರು, ಈಶಾನ್ಯ ರಾಜ್ಯಗಳ ಅತಿಥಿಗಳು ಮತ್ತು ಅತ್ಯುತ್ತಮ ನವೋದ್ಯಮಗಳು ಸೇರಿದ್ದಾರೆ.

ಆಹ್ವಾನಿತ ಅತಿಥಿಗಳಲ್ಲಿ ಕೆಲವರು ಸ್ವ-ಸಹಾಯ ಗುಂಪುಗಳ ಮೂಲಕ ಆದಾಯ ಮತ್ತು ಉದ್ಯೋಗ ಸೃಷ್ಟಿಯನ್ನು ಖಚಿತಪಡಿಸಿಕೊಳ್ಳಲು ಅತ್ಯುತ್ತಮ ಕೆಲಸಗಳನ್ನು ಮಾಡುತ್ತಿದ್ದಾರೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಪ್ಯಾರಾ-ಒಲಿಂಪಿಕ್ ತಂಡದ ಸದಸ್ಯರು, ಚೆಸ್ ಒಲಿಂಪಿಯಾಡ್‌ನ ಪದಕ ವಿಜೇತರು, ಬ್ರಿಡ್ಜ್ ವರ್ಲ್ಡ್ ಗೇಮ್ಸ್‌ನ ಬೆಳ್ಳಿ ಪದಕ ವಿಜೇತರು ಮತ್ತು ಸ್ನೂಕರ್ ವರ್ಲ್ಡ್ ಚಾಂಪಿಯನ್‌ಶಿಪ್ ಚಿನ್ನದ ಪದಕ ವಿಜೇತರನ್ನು ಸಹ ವಿಶೇಷ ಅತಿಥಿಗಳಾಗಿ

ಆಹ್ವಾನಿಸಲಾಗಿದೆ. ಈ ಅತಿಥಿಗಳು ರಾಷ್ಟ್ರೀಯ ಯುದ್ಧ ಸ್ಮಾರಕ, ಪ್ರಧಾನಮಂತ್ರಿ ಸಂಗ್ರಹಾಲಯ ಮತ್ತು ದೆಹಲಿಯ ಇತರೆ ಪ್ರಮುಖ ಸ್ಥಳಗಳಿಗೆ ಭೇಟಿ ನೀಡಲಿದ್ದಾರೆ ಎಂದು ಸಚಿವಾಲಯ ತಿಳಿಸಿದೆ.

***************

ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವ ಡಾ. ಜಿತೇಂದ್ರ ಸಿಂಗ್ ನಿನ್ನೆ "ಗಗನಯಾನ್" ಅಡಿಯಲ್ಲಿ ಭಾರತದ ಮೊದಲ "ಸಿಬ್ಬಂದಿ ರಹಿತ " ಕಾರ್ಯಾಚರಣೆ ಸೇರಿದಂತೆ ಇಸ್ರೋದ ಪ್ರಮುಖ ಮುಂಬರುವ ಬಾಹ್ಯಾಕಾಶ ಕಾರ್ಯಾಚರಣೆಗಳ ಉನ್ನತ ಮಟ್ಟದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಇದರ ಜೊತೆಗೆ, ಎರಡು ಜಿಎಸ್‌ಎಲ್‌ವಿ ಕಾರ್ಯಾಚರಣೆಗಳು, ಎಲ್‌ವಿಎಂ-೩ ರ ವಾಣಿಜ್ಯ ಉಡಾವಣೆ ಮತ್ತು ಇಸ್ರೋ-ನಾಸಾ ಸಹಯೋಗದ ಸಿಂಥೆಟಿಕ್ ಅಪರ್ಚರ್ ರಾಡಾರ್ -ಎನ್‌ಐಎಸ್‌ಎಆರ್ ಉಪಗ್ರಹ ಕಾರ್ಯಾಚರಣೆ ಈ ವರ್ಷ ನಿಗದಿಪಡಿಸಲಾಗಿದೆ.

ಸಭೆಯಲ್ಲಿ ಸಚಿವರೊಂದಿಗೆ ಇಸ್ರೋ ಮಾಜಿ ಅಧ್ಯಕ್ಷ ಡಾ. ಎಸ್. ಸೋಮನಾಥ್, ನಿಯೋಜಿತ ಅಧ್ಯಕ್ಷ ಡಾ. ವಿ. ನಾರಾಯಣನ್ ಮತ್ತು ಇತರ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಸಭೆಯಲ್ಲಿ, ಸಚಿವರು, ನಾವೀನ್ಯತೆಯನ್ನು ಬೆಳೆಸುವಲ್ಲಿ ಮತ್ತು ಬಾಹ್ಯಾಕಾಶ ರಾಷ್ಟ್ರವಾಗಿ ಭಾರತದ ಸ್ಥಾನವನ್ನು ಮುನ್ನಡೆಸುವಲ್ಲಿ ಇಸ್ರೋದ ಪ್ರಯತ್ನಗಳನ್ನು ಶ್ಲಾಘಿಸಿದರು. ದೇಶದ ಬಾಹ್ಯಾಕಾಶ ಮಹತ್ವಾಕಾಂಕ್ಷೆಗಳನ್ನು ಉತ್ತೇಜಿಸುವಲ್ಲಿ ಸಾರ್ವಜನಿಕ-ಖಾಸಗಿ ಸಹಯೋಗದ ಮಹತ್ವವನ್ನು ಅವರು ಒತ್ತಿ ಹೇಳಿದರು.

***************

ಗುಜರಾತ್‌ನ ರಾಜ್‌ಕೋಟ್‌ನಲ್ಲಿ ಅಂತಾರಾಷ್ಟ್ರೀಯ ಮಹಿಳಾ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿಂದು ಭಾರತ ಹಾಗೂ ಐರ್ಲ್ಯಾಂಡ್ ತಂಡಗಳು ಮುಖಾಮುಖಿಯಾಗಿವೆ.

ಪಂದ್ಯ ಬೆಳಗ್ಗೆ ೧೧ ಗಂಟೆಗೆ ಆರಂಭವಾಗಲಿದೆ. ಸ್ಮೃತಿ ಮಂದಾನ ತಂಡದ ನೇತೃತ್ವವಹಿಸಿದ್ದು, ದೀಪ್ತಿ ಶರ್ಮಾ ಉಪನಾಯಕಿಯಾಗಿದ್ದಾರೆ. ನಾಯಕಿ ಹರ್ಮನ್ ಪ್ರೀತ್ ಕೌರ್, ರೇಣುಕಾ ಸಿಂಗ್ ಠಾಕೂರ್ ಅವರಿಗೆ ವಿಶ್ರಾಂತಿ ನೀಡಲಾಗಿದೆ.

ಸರಣಿಯ ಎರಡನೇ ಪಂದ್ಯ ಬರುವ ಭಾನುವಾರ ಹಾಗೂ ಕೊನೆಯ ಪಂದ್ಯ ಇದೇ ೧೫ ರಂದು ನಡೆಯಲಿದೆ.

********ಮುಕ್ತಾಯ*******